# IN THE COURT OF THE ADDL. SENIOR CIVIL JUDGE & JMFC., GUBBI
# OS – **278/2022**

Witness present and duly sworn on : 13.06.2024.

<u>Cross Examination: by Counsel for Defendant No.1 and 2. :</u>

ನನ್ನ ತಾಯಿಯ ಹೆಸರು ಲಕ್ಷ್ಮಿದೇವಮ್ಮ. ದೊಡ್ಡಶಿವಣ್ಣ ನನ್ನ ತಾತ. ಅವರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳು ಮರಿಯಪ್ಪ, ಲಕ್ಷ್ಮಿದೇವಮ್ಮ, ಗಂಗಣ್ಣ. 1969 ನೇ ಇಸ್ವಿಯಲ್ಲಿ ನನ್ನ ತಾಯಿ ಮರಣ ಹೊಂದಿದರು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ತಾತ ಬದುಕಿದ್ದರು ಎಂದರೆ ಸರಿ. ನನ್ನ ತಾಯಿಗೆ ನಾನು ಒಬ್ಬಳೇ ಮಗಳು.

ಸರ್ವೆ ನಂ.51/2 ವಿಸ್ತೀರ್ಣ 2 ಎಕರೆ 24 ಗುಂಟೆ, ಸರ್ವೆ ನಂ.63/1 ವಿಸ್ತೀರ್ಣ 1 ಎಕರೆ 13 ಗುಂಟೆ , ಸರ್ವೆ ನಂ.63/5 ವಿಸ್ತೀರ್ಣ 35 ಗುಂಟೆ, ಸರ್ವೆ ನಂ.63/8 ಎ ವಿಸ್ತೀರ್ಣ 20 ಗುಂಟೆ, ಸರ್ವೆ ನಂ.63/8 ಎ 3 ವಿಸ್ತೀರ್ಣ 29 ಗುಂಟೆ, ಸರ್ವೆ ನಂ.59/6 ವಿಸ್ತೀರ್ಣ 1 ಎಕರೆ 4 ಗುಂಟೆ ಜಮೀನುಗಳು ಕೆ. ಕಲ್ಲಹಳ್ಳಿ ಗ್ರಾಮಕ್ಕೆ ಸೇರಿದ ಆಸ್ತಿಗಳು ಎಂದರೆ ಸರಿ. ಸರ್ವೆ ನಂ.46 ವಿಸ್ತೀರ್ಣ 1 ಎಕರೆ, ಸರ್ವೆ ನಂ.22/1 ವಿಸ್ತೀರ್ಣ 20 ಗುಂಟೆ ಜಮೀನುಗಳು ಅಮಾನಿಕೆರೆಗೆ ಗ್ರಾಮಕ್ಕೆ ಸೇರಿದ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳು ದೊಡ್ಡಶಿವಣ್ಣರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗಳನ್ನು ನನ್ನ ತಾಯಿಯ ಸಹೋದರರಾದ ಮರಿಯಪ್ಪ ಮತ್ತು ಗಂಗಣ್ಣರವರು

ದಿನಾಂಕಃ 27.10.1977 ರಂದು ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ.51/2 ರಲ್ಲಿ 1 ಎಕರೆ 12 ½ ಗುಂಟೆ, ಸರ್ವೆ ನಂ.63/1 ರಲ್ಲಿ 26 ½ ಗುಂಟೆ, ಸರ್ವೆ ನಂ.63/5 ರಲ್ಲಿ 17 ½ ಗುಂಟೆ, ಸರ್ವೆ ನಂ.63/8 ಎ ರಲ್ಲಿ 10 ಗುಂಟೆ, ಸರ್ವೆ ನಂ.63/8 ಎ 3 ರಲ್ಲಿ 14 ಗುಂಟೆ, ಸರ್ವೆ ನಂ.59/6 ರಲ್ಲಿ 22 ಗುಂಟೆ , ಸರ್ವೆ ನಂ.46 ರಲ್ಲಿ 20 ಗುಂಟೆ , ಸರ್ವೆ ನಂ.22/1 ರಲ್ಲಿ 10 ಗುಂಟೆ ಜಮೀನುಗಳು ಮರಿಯಪ್ಪನವರ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಅದರಂತೆ ಸದರಿ ಮೇಲೆ

ಹೇಳಿರುವ ಜಮೀನುಗಳು ಮತ್ತು ಅದರಂತೆ ವಿಸ್ತೀರ್ಣದ ಆಸ್ತಿಗಳು ಗಂಗಣ್ಣನವರ ಭಾಗಕ್ಕೆ ಹೋಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ವಿಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಭಾಗದ ಪ್ರಕಾರ ಕಂದಾಯ ಅಧಿಕಾರಿಗಳು ಖಾತೆ ಪಹಣಿಗಳನ್ನು ಮರಿಯಪ್ಪ ಮತ್ತು ಗಂಗಣ್ಣನವರ ಹೆಸರಿಗೆ ಬದಲಾವಣೆ ಮಾಡಿದ್ದಾರೆಂದರೆ ಸರಿಯಲ್ಲ. ಅದಕ್ಕೆ ಸಂಭಂದಿಸಿದ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆಂದರೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ವಿಭಾಗಕ್ಕೆ ಬಂದ ಜಮೀನುಗಳನ್ನು ಅವರಿಬ್ಬರು ಅನುಭವಿಸಿಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ.

ದೊಡ್ಡಶಿವಣ್ಣ, ಮರಿಯಪ್ಪ ಮತ್ತು ಗಂಗಣ್ಣನವರ ವಿಭಾಗ ಮಾಡಿಕೊಂಡಾಗ ನನ್ನ ತಾಯಿ ಲಕ್ಷ್ಮಿದೇವಮ್ಮ ಬದುಕಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಿಭಾಗ ಆಗಿರುವುದಿಲ್ಲ. ಮರಿಯಪ್ಪನವರು 1982 ರಲ್ಲಿ ತೀರಿಕೊಂಡರು ಎಂದರೆ ಸರಿ. ಅವರಿಗೆ ಶಿವಮ್ಮ ಎಂಬ ಹೆಂಡತಿ ಮತ್ತು ಶಿವಗಂಗ, ಸೌಭಾಗ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಸೌಭಾಗ್ಯ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮರಿಯಪ್ಪ ತೀರಿಕೊಂಡ ನಂತರ ಅವರ ಭಾಗಕ್ಕೆ ಬಂದಿದ್ದ ಆಸ್ತಿಗಳಲ್ಲಿ ಶಿವಮ್ಮ, ಶಿವಗಂಗಾ ಮತ್ತು ಸೌಭಾಗ್ಯ ರವರು ಸ್ವಾಧೀನದಲ್ಲಿ ಇದ್ದಾರೆಂದರೆ, ಸ್ವಾಧೀನದಲ್ಲಿ ಇದ್ದಾರೆ ಆದರೆ ವಿಭಾಗ ಆಗಿರುವುದಿಲ್ಲ. ಮರಿಯಪ್ಪನವರು ತೀರಿಕೊಂಡ ನಂತರ ಅವರ ಭಾಗಕ್ಕೆ ಬಂದಿದ್ದ ಆಸ್ತಿಗಳನ್ನು ಅವರ ಹೆಂಡತಿ ಶಿವಮ್ಮ ರವರ ಹೆಸರಿಗೆ 1982-83 ರಲ್ಲಿ ಖಾತೆ ಪಹಣಿ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಅದರಂತೆ ಗಂಗಣ್ಣರವರ ಮರಣದ ನಂತರ ಅವರ ಭಾಗಕ್ಕೆ ಬಂದಿದ್ದ ಆಸ್ತಿಗಳನ್ನು ಅವರ ಹೆಂಡತಿ ಮತ್ತು ಮಕ್ಕಳು ಅನುಭವಿಸುತ್ತಿದ್ದು, ಖಾತೆ ಪಹಣಿ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ.

ನನ್ನ ಮದುವೆಯಾಗಿ ಸುಮಾರು 33 ವರ್ಷಗಳಾಗಿವೆ. ನನ್ನನ್ನು ಕೆ. ಕಲ್ಲಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ನನ್ನ ಮದುವೆಯ ನಂತರ ನೀಲೆಗೌಡನ ಪಾಳ್ಯಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆಯ ನಂತರ ನಾನು ಯಾವತ್ತಿಗೂ ಮರಿಯಪ್ಪ ಮತ್ತು ಗಂಗಣ್ಣರವರಿಂದ ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ಇನ್ನೊಬ್ಬ ಮಾವ ಗಂಗಣ್ಣ ರವರ ಮಗ ದಯಾನಂದ ನನಗೆ ಚೆನ್ನಾಗಿ ಪರಿಚಯ ಮತ್ತು ನನ್ನ ಸಂಬಂದಿ ಎಂದರೆ ಸರಿ. ನಾನು ಅವರೊಂದಿಗೆ ಚೆನ್ನಾಗಿ ಇದ್ದೇನೆ ಎಂದರೆ ಸರಿ. ಅವರು ಶಿವಮ್ಮ,

ಶಿವಗಂಗಾ ಮತ್ತು ಸೌಭಾಗ್ಯರವರಿಗೆ ಒಂದು ಆಸ್ತಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಎಂದು ಕೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಮಾರಾಟ ಮಾಡಲು ಒಪ್ಪದೆ ಇದ್ದ ಕಾರಣ 4 ನೇ ಪ್ರತಿವಾದಿ ನನ್ನ ಮೂಲಕ ಈ ದಾವೆ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಶಿವಗಂಗಾ ಮತ್ತು ಸೌಭಾಗ್ಯ ರವರ ಮದುವೆಗೋಸ್ಕರ ಮಾಡಿದ ಸಾಲದ ತಿರುವಳಿಗೊಸ್ಕರ ಕೆ. ಕಲ್ಲಹಳ್ಳಿ ಗ್ರಾಮದ ಸರ್ವೆ ನಂ.63/5 ರಲ್ಲಿ 17 ½ ಗುಂಟೆ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.63/8 ಎ ರಲ್ಲಿ ಪ್ರತಿವಾದಿಗಳು 1 ಮತ್ತು 2 ರವರು ಸಿದ್ದಗಂಗಮ್ಮನವರಿಗೆ ಸರ್ವೆ ನಂ.63/8 ಎ ರಲ್ಲಿ 10 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.63/8 ಎ ರಲ್ಲಿ 14 ½ ಗುಂಟೆ ಜಮೀನನ್ನು ನೀಲೆಗೌಡನ ಪಾಳ್ಯದ ರಾಜಣ್ಣನವರಿಗೆ 1999 ರಲ್ಲಿ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.59/6 ರಲ್ಲಿ 22 ಗುಂಟೆ ಜಮೀನನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅವರನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಸರ್ವೆ ನಂ.63/1 ರಲ್ಲಿ 26 ½ ಗುಂಟೆ ಜಮೀನನ್ನು ಭವ್ಯರವರಿಗೆ ಮಾರಾಟ ಮಾಡಿದ್ದಾರೆಂದರೆ ಈ ದಾವೆಯನ್ನು ಸಲ್ಲಿಸಿದ ನಂತರ ಮಾರಾಟ ಮಾಡಿದ್ದಾರೆ. ಸರ್ವೆ ನಂ.25/1 ರಲ್ಲಿ 10 ಗುಂಟೆ ಜಮೀನನ್ನು ರಾಜಣ್ಣ ನವರಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು 1 ಮತ್ತು 2 ನೇ ಪ್ರತಿವಾದಿಗಳು ಈ ದಾವೆಯನ್ನು ಸಲ್ಲಿಸುವ ಬಹಳ ವರ್ಷಗಳ ಮುಂಚೆ ಮಾರಾಟ ಮಾಡಿದ್ದ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ರಾಜಣ್ಣ, ಸಿದ್ದಗಂಗಮ್ಮ, ಭವ್ಯ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಕೆ. ಕಲ್ಲಹಳ್ಳಿ ಗ್ರಾಮದ ಒಂದು ಖಾಲಿ ಜಾಗ ಮತ್ತು ಒಂದು ಮನೆ ಖಾತೆ ನಂ.15/226/ಬಿ ಆಸ್ತಿಯನ್ನು ಭವ್ಯ ಮತ್ತು ಸುಮ ರವರಿಗೆ ಮಾರಾಟ ಮಾಡಿದ್ದಾರೆಂದರೆ ಈ ದಾವೆಯನ್ನು ಸಲ್ಲಿಸಿದ ನಂತರ ಮಾರಾಟ ಮಾಡಿದ್ದಾರೆ. ಸರ್ವೆ ನಂ.51/2 ರಲ್ಲಿ 1 ಎಕರೆ 12 ಗುಂಟೆ ಜಮೀನನ್ನು ತ್ಯಾಗಟೂರು ಗ್ರಾಮದ ಭವ್ಯ ರವರಿಗೆ ಮಾರಾಟ ಮಾಡಿದ್ದಾರೆಂದರೆ ಈ ದಾವೆಯನ್ನು ಸಲ್ಲಿಸಿದ ನಂತರ ಮಾರಾಟ ಮಾಡಿದ್ದಾರೆ. ಈಗ 1 ಮತ್ತು 2 ನೇ ಪ್ರತಿವಾದಿಗಳ ಹತ್ತಿರ ಅಮಾನಿಕೆರೆ ಗ್ರಾಮದ ಸರ್ವೆ ನಂ.46 ರಲ್ಲಿ 20 ಗುಂಟೆ ಜಮೀನು ಸ್ವಾಧೀನದಲ್ಲಿ ಇದೆ ಎಂದರೆ ಸರಿ.

ಗಂಗಣ್ಣರವರಿಗೆ ಕಾತ್ಯಾಯಿನಿ ಎಂಬ ಮಗಳಿದ್ದಾಳೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮರಿಯಪ್ಪ ಮತ್ತು ಗಂಗಣ್ಣರವರು 1977 ರಲ್ಲಿ ವಿಭಾಗ ಮಾಡಿಕೊಂಡು ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

(Further cross examination deferred at the request of counsel for the defendants No.1 and 2)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi